

ಪುಷ್ಪ2 ಚಿತ್ರದಲ್ಲಿ ರಶ್ಮಿಕಾ ಮಂದಣ್ಣ ಮತ್ತು ಅಲ್ಲು ಅರ್ಜುನ್

**‘ಕೆಜಿಎಫ್ 2’ ಸಿನಿಮಾ ಉಂಟು ಮಾಡಿದ್ದ ಸಂಚಲನವನ್ನು ‘ಪುಷ್ಪ 2’ ಉಂಟು ಮಾಡಿದೆ. ಅಷ್ಟು ಮಾತ್ರವಲ್ಲ, ‘ಕೆಜಿಎಫ್ 2’ ಗಳಿಕೆಯ ದಾಖಲೆಯನ್ನು ಪುಷ್ಪ ಮುರಿಯಲಿದ್ದಾನೆ ಎಂದು ವಿತರಕರು ಅಂದಾಜು ಮಾಡಿದ್ದಾರೆ.**



ಮಹಾಪ್ರಭುವೂ ಒಪ್ಪಿಕೊಂಡಿದ್ದಾನೆ. ಮೂರ್ನಾಲ್ಕು ವರ್ಷಕ್ಕೊಂದು ಸಿನಿಮಾ ಮಾಡುವ, ಕಿರುತೆರೆಯಲ್ಲಿ ಬಿಗ್ ಬಾಸ್ ಎಂದು ತಮ್ಮನ್ನು ವಿಜೃಂಭಿಸಿಕೊಂಡು ತೃಪ್ತಿಪಡುವ, ಶೆಡ್ಡು–ಕೋರ್ಟು–ಜೈಲುಗಳ ನಡುವೆ ತಮ್ಮೊಳಗಿನ ಕಲಾವಿದನನ್ನು ಕಳೆದುಕೊಂಡಿರುವ, ಪ್ಯಾನ್ ಇಂಡಿಯಾ ಭ್ರಾಮಕಲೋಕದಲ್ಲಿ ಬೇರುಗಳನ್ನೇ ಮರೆಯುವ ನಾಯಕನಟರು ಅಪ್ರಸ್ತುತಗೊಳ್ಳುತ್ತ, ಅವರ ಜಾಗದಲ್ಲಿ ನೆರೆಹೊರೆ ಸೂಪರ್‌ಸ್ಟಾರ್‌ಗಳು ನಿಧಾನವಾಗಿ ನೆಲೆ ಕಂಡುಕೊಳ್ಳುತ್ತಿದ್ದಾರೆ. ಈ ಸಂದರ್ಭ ‘ಪುಷ್ಪ 2’ದಂಥ ಸಿನಿಮಾಕ್ಕೆ ಪೂರಕವಾಗಿದೆ. ‘ಪುಷ್ಪ ಎಂದರೆ ಫ್ಲವರ್ ಅಲ್ಲ, ಫೈರ್’ ಎನ್ನುವ ಡೈಲಾಗ್ ಕನ್ನಡ ಚಿತ್ರೋದ್ಯಮದ ಮಂದಿಗೆ ಹೇಳಿಮಾಡಿಸಿದಂತಿದೆ.

‘ಪುಷ್ಪ 2’ ತೆರೆಕಂಡ ಸಂದರ್ಭವನ್ನು ಕನ್ನಡ ಚಿತ್ರರಂಗದ ಎಚ್ಚೆತ್ತ ಮಂದಿ ಬುದ್ಧಿವಂತಿಕೆಯಿಂದ ಬಳಸಿಕೊಳ್ಳುವ ಅವಕಾಶವೊಂದಿತ್ತು. ಅದೇ ಕರುಳಿನಕರೆ! ಅರ್ಥಪೂರ್ಣ ಸಿನಿಮಾಗಳಿಗಿಂತಲೂ ‘ಭಾಷೆ’ ಎನ್ನುವ ಭಾವುಕತೆಯ ಮೂಲಕವೇ ಪ್ರೇಕ್ಷಕರನ್ನು ಮರುಳುಗೊಳಿಸುವುದರಲ್ಲಿ ಕನ್ನಡ ಚಿತ್ರರಂಗ ದಶಕಗಳ ಉದ್ದಕ್ಕೂ ಯಶಸ್ವಿಯಾಗಿದೆ. ಕರುಳಿನ ಭಾಷೆ ಕೊರಳಿಗೆ ಬರುವ ಚಾಕಚಕ್ಯತೆ ಈಗ ಕೈಕೊಟ್ಟಂತಿದೆ. ಹಳೆಯ ತಂತ್ರಕ್ಕೆ ಮರುಳಾಗದಷ್ಟು ಮಟ್ಟಿಗೆ ಪ್ರೇಕ್ಷಕರೂ ಜಾಣರಾದಂತಿದೆ. ಆದರೆ, ದೊಡ್ಡ ಬಜೆಟ್‌ನ ಪರಭಾಷಾ ಚಿತ್ರಗಳ ಎದುರು, ಕಥನದ ಕಾರಣಕ್ಕೆ ಮುಖ್ಯವಾದ ಹಾಗೂ ಈ ನೆಲದ ಘಮದ ಸಿನಿಮಾಗಳಿಗೆ ಆದ್ಯತೆ ಕೊಡುವಂತೆ ಪ್ರೇಕ್ಷಕರ ಮನವೊಲಿಸುವ ಕೆಲಸವನ್ನು ಚಿತ್ರೋದ್ಯಮ ಈಗ ಮಾಡಬಹುದಿತ್ತು. ‘ಪುಷ್ಪ 2’ ಸುನಾಮಿಯ ಬೆನ್ನಿಗೇ ಕನ್ನಡದ

‘ಕೃಷ್ಣಂ ಪ್ರಣಯ ಸಖಿ’ ಚಿತ್ರದಲ್ಲಿ ಮಾಳವಿಕ ನಾಯರ್